## ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಸರ್ಕಾರಿ ಅಧಿಕೃತ ಕೆಲಸಗಳಿಗಾಗಿ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ.

******

ಓದಲಾಗಿದೆ:

1. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 96 ಶಿವಾನಿ 2012, ದಿನಾಂಕ: 23.08.2012.
2. ಸಾರಿಗೆ ಇಲಾಖೆಯ ಹಿಂಬರಹ ಸಂಖ್ಯೆ: ಟಿಡಿ 202 ಟಿಡಿಓ 2021, ದಿನಾಂಕ:08.02.2022.
3. ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 156 ವೆಚ್ಚ-12/2019, ದಿನಾಂಕ:22.03.2022.
4. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 30 ಶಿವಾನಿ 2019, ದಿನಾಂಕ: 31.03.2022.
5. ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 372 ವೆಚ್ಚ-12/2022, ದಿನಾಂಕ:07.08.2023.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರದ ಆದೇಶ ದಿನಾಂಕ:23.08.2012ರಲ್ಲಿ ಸರ್ಕಾರದ ಅಧಿಕೃತ ಕೆಲಸ ಕಾರ್ಯಗಳಿಗಾಗಿ ಖಾಸಗಿ ವಾಹನಗಳನ್ನು ಬಾಡಿಗೆಗೆ ಪಡೆದು ನೀಡುವ ಬಾಡಿಗೆ ದರ ಹಾಗೂ ಕಾಲಮಿತಿಯನ್ನು ಗರಿಷ್ಠ ಮಿತಿಗೊಳಪಡಿಸಿ ನಿಗದಿಪಡಿಸಲಾಗಿತ್ತು.

| ಕ್ರ.ಸಂ | ಹವಾ ನಿಯಂತ್ರಣ ರಹಿತ (ನಾನ್‌ಎ.ಸಿ) ವಾಹನಗಳಿಗೆ | ರೂ.ಗಳಲ್ಲಿ |
|---|---|---|
| (ಅ) | ಮಾಸಿಕ 2,500 ಕಿ.ಮೀ ಅಥವಾ 300 ಗಂಟೆಗಳು | ರೂ. 25,000/- |
| (ಆ) | 2,500 ಕಿ.ಮೀ ನಂತರ ಪ್ರತಿ ಕಿ.ಮೀಗೆ | ರೂ. 5,50/- |
| (ಇ) | 300 ಗಂಟೆಗಳ ನಂತರ ಪ್ರತಿ ಗಂಟೆಗೆ | ರೂ. 40,00/- |
| ಹವಾ ನಿಯಂತ್ರಿತ (ಎ.ಸಿ ವಾಹನಗಳಿಗೆ) | | ರೂ.ಗಳಲ್ಲಿ |
| ಅ) | ಮಾಸಿಕ 2,500 ಕಿ.ಮೀ ಅಥವಾ 300 ಗಂಟೆಗಳು | ರೂ. 30,000/- |
| ಆ) | 2,500 ಕಿ.ಮೀ ನಂತರ ಪ್ರತಿ ಕಿ.ಮೀ ಗೆ | ರೂ. 6,50/- |
| ಇ) | 300 ಗಂಟೆಗಳ ನಂತರ ಪ್ರತಿ ಗಂಟೆಗೆ | ರೂ. 55,00/- |

ಈ ಮೇಲಿನ ದರಗಳನ್ನು ಪರಿಷ್ಕರಿಸಲು ಸರ್ಕಾರ / ಖಾಸಗಿ ಸಂಸ್ಥೆಗಳಿಂದ ಮನವಿಗಳು ಸ್ವೀಕೃತವಾಗಿದ್ದವು. ಪ್ರಸ್ತುತ ಇಂಧನ ಹಾಗೂ ಯಂತ್ರೋಪಕರಣಗಳ ಬೆಲೆಯ ಏರಿಕೆಯ ಹಿನ್ನೆಲೆಯಲ್ಲಿ ಕೋರಿಕೆಯನ್ನು ಪರಿಶೀಲಿಸಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಆಯುಕ್ತರು, ಸಾರಿಗೆ ಇಲಾಖೆ, ಬೆಂಗಳೂರು ಇವರನ್ನು ಕೋರಲಾಗಿತ್ತು.

ಮೇಲೆ ಓದಲಾದ (2)ರ ದಿನಾಂಕ:08.02.2022ರ ಸಾರಿಗೆ ಇಲಾಖೆಯಿಂದ ಬಂದಿರುವ ಹಿಂಬರಹದಲ್ಲಿ ಈ ಕೆಳಕಂಡಂತೆ ದರ ಪರಿಷ್ಕರಣೆ ಕುರಿತು ಸಲ್ಲಿಸಿರುವ ವರದಿಯನ್ನು ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ

| ಕ್ರಸಂ | ಹವಾ ನಿಯಂತ್ರಣ ರಹಿತ ವಾಹನಗಳಿಗೆ (Non AC) | ರೂ.ಗಳಲ್ಲಿ |
|---|---|---|
| (ಅ) | ಮಾಸಿಕ 2,500 ಕಿ.ಮೀ ಅಥವಾ 300 ಗಂಟೆಗಳು– | ರೂ.35,000/– + Taxes |
| (ಆ) | 2,500 ಕಿ.ಮೀ ನಂತರ ಪ್ರತಿ ಕಿ.ಮೀ ಗೆ | ರೂ.10/– + Taxes |
| (ಇ) | 300 ಗಂಟೆಗಳ ನಂತರ ಪ್ರತಿ ಗಂಟೆಗೆ | ರೂ.100/– + Taxes |
| | ಹವಾ ನಿಯಂತ್ರಿತ ವಾಹನಗಳಿಗೆ (AC) | ರೂ.ಗಳಲ್ಲಿ |
| ಅ) | ಮಾಸಿಕ 2,500ಕಿ.ಮೀ ಅಥವಾ 300 ಗಂಟೆಗಳು– | ರೂ.40,000/– + Taxes |
| ಆ) | 2,500 ಕಿ.ಮೀ ನಂತರ ಪ್ರತಿ ಕಿ.ಮೀಗೆ | ರೂ.12/– + Taxes |
| ಇ) | 300 ಗಂಟೆಗಳ ನಂತರ ಪ್ರತಿ ಗಂಟೆಗೆ | ರೂ.150/– + Taxes |

ಮೇಲೆ ಓದಲಾದ (3)ರ ದಿನಾಂಕ: 22.03.2022ರ ಹಿಂಬರದಲ್ಲಿ ಆರ್ಥಿಕ ಇಲಾಖೆಯು ಮೇಲೆ ವಿವರಿಸಿರುವಂತೆ ದರ ಪರಿಷ್ಕರಿಸಲು ಆರ್ಥಿಕ ಇಲಾಖೆಯು ಸಹಮಿತಿಸಿದೆ.

ಮೇಲೆ ಓದಲಾದ (4)ರ ಸರ್ಕಾರದ ಆದೇಶ ದಿನಾಂಕ:31.03.2022ರಲ್ಲಿ ಸರ್ಕಾರದ ಅಧಿಕೃತ ಕೆಲಸ ಕಾರ್ಯಗಳಿಗಾಗಿ ಖಾಸಗಿ ವಾಹನಗಳನ್ನು ಬಾಡಿಗೆಗೆ ಪಡೆದು ನೀಡುವ ಬಾಡಿಗೆ ದರ ಪರಿಷ್ಕರಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (5)ರ ಆರ್ಥಿಕ ಹಿಂಬರಹದಲ್ಲಿ ಸರ್ಕಾರದ ಅಧಿಕೃತ ಕೆಲಸಗಳಿಗಾಗಿ ಬಾಡಿಗೆ ಆಧಾರದ ಮೇಲೆ ಪಡೆಯುವ ಹವಾ ನಿಯಂತ್ರಣ ರಹಿತ ವಾಹನಗಳ ವಾಹನ ಚಾಲಕರಿಗೆ ಮಾಸಿಕ ರೂ.35,000/– ಮತ್ತು ಹವಾ ನಿಯಂತ್ರಿತ ವಾಹನ ಚಾಲಕರಿಗೆ ಮಾಸಿಕ ರೂ.40,000/– ಪಾವತಿಸಿ ತೆರಿಗೆಯನ್ನು ಸರ್ಕಾರವೇ ಭರಿಸುವಂತೆ ತಿಳಿಸಲಾಗಿರುತ್ತದೆ.

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 30 ಶಿವಾನಿ 2019, ಬೆಂಗಳೂರು, ದಿನಾಂಕ: 22.08.2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರದ ಅಧಿಕೃತ ಕೆಲಸ ಕಾರ್ಯಗಳಿಗಾಗಿ ಖಾಸಗಿ ವಾಹನಗಳನ್ನು ಬಾಡಿಗೆಗೆ ಪಡೆಯಲು ಉಲ್ಲೇಖ (5)ರ ಆರ್ಥಿಕ ಇಲಾಖೆಯು ಸಹಮತಿಸಿರುವಂತೆ, ಸರ್ಕಾರದ ಅಧಿಕೃತ ಕೆಲಸಗಳಿಗಾಗಿ ಬಾಡಿಗೆ ಆಧಾರದ ಮೇಲೆ ಪಡೆಯುವ ಹವಾ ನಿಯಂತ್ರಣ ರಹಿತ ವಾಹನಗಳ ವಾಹನ ಚಾಲಕರಿಗೆ ಮಾಸಿಕ ರೂ.35,000/– ಮತ್ತು ಹವಾ ನಿಯಂತ್ರಿತ ವಾಹನ ಚಾಲಕರಿಗೆ ಮಾಸಿಕ ರೂ.40,000/–ಗಳನ್ನು ಪಾವತಿಸಿ ತೆರಿಗೆಯನ್ನು ಸರ್ಕಾರವೇ ಭರಿಸಬೇಕಾಗಿರುತ್ತದೆ ಎಂದು ಈ ಕೆಳಕಂಡಂತೆ ವಿವರಿಸಲಾಗಿರುವ ದರವು ಕೂಡಲೇ ಜಾರಿಗೆ ಬರುವಂತೆ ಆದೇಶಿಸಿದೆ.

..3

| ಕ್ರಸಂ | ಹವಾ ನಿಯಂತ್ರಣ ರಹಿತ ವಾಹನಗಳಿಗೆ (Non AC) | ರೂ.ಗಳಲ್ಲಿ |
|---|---|---|
| (ಅ) | ಮಾಸಿಕ 2,500 ಕಿ.ಮೀ ಅಥವಾ 300 ಗಂಟೆಗಳು- | ರೂ.35,000/- + Taxes |
| (ಆ) | 2,500 ಕಿ.ಮೀ ನಂತರ ಪ್ರತಿ ಕಿ.ಮೀ ಗೆ | ರೂ.10/- + Taxes |
| (ಇ) | 300 ಗಂಟೆಗಳ ನಂತರ ಪ್ರತಿ ಗಂಟೆಗೆ | ರೂ.100/- + Taxes |
| | ಹವಾ ನಿಯಂತ್ರಿತ ವಾಹನಗಳಿಗೆ (AC) | ರೂ.ಗಳಲ್ಲಿ |
| ಅ) | ಮಾಸಿಕ 2,500ಕಿ.ಮೀ ಅಥವಾ 300 ಗಂಟೆಗಳು- | ರೂ.40,000/- + Taxes |
| ಆ) | 2,500 ಕಿ.ಮೀ ನಂತರ ಪ್ರತಿ ಕಿ.ಮೀಗೆ | ರೂ.12/- + Taxes |
| ಇ) | 300 ಗಂಟೆಗಳ ನಂತರ ಪ್ರತಿ ಗಂಟೆಗೆ | ರೂ.150/- + Taxes |

ಉಳಿದಂತೆ ವಾಹನ ನೀತಿಗೆ ಸಂಬಂಧಿಸಿದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹಾಗೂ ಆರ್ಥಿಕ ಇಲಾಖೆಯು ಕಾಲಕಾಲಕ್ಕೆ ಹೊರಡಿಸುವ ಎಲ್ಲಾ ಸೂಚನೆಗಳನ್ನು ಹಾಗೂ ಷರತ್ತುಗಳನ್ನು ಪಾಲಿಸತಕ್ಕದ್ದು ಮತ್ತು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 278 ಶಿವಾನಿ 2000, ದಿನಾಂಕ: 18.03.2002 ರಲ್ಲಿರುವ ಷರತ್ತುಗಳು ಮುಂದುವರೆಸತಕ್ಕದ್ದು ಹಾಗೂ ಈ ಪರಿಷ್ಕೃತ ದರಗಳು ಭವಿಷ್ಯವರ್ತಿಯಾಗಿ (Prospectively) ಅನ್ವಯವಾಗತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 372 ವೆಚ್ಚ-12/2022, ದಿನಾಂಕ: 07.08.2023 ರಲ್ಲಿನ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ಎ.ಮೊಹಮ್ಮದ್ ಅಕ್ಬರ್)
ಸರ್ಕಾರದ ಅಧೀನ ಕಾರ್ಯದರ್ಶಿ-2(ಪ್ರ),
ಸಿಆಸು ಇಲಾಖೆ (ರಾಜ್ಯ ಶಿಷ್ಟಾಚಾರ)
22-08-23

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರ-ರಾಜ್ಯಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ, 200 ಪ್ರತಿಗಳನ್ನ ಒದಗಿಸಲು ಕೋರಿದೆ.

ಪ್ರತಿ:

1) ಮಹಾಲೇಖಪಾಲರು (ಎ & ಇ) / (ಆಡಿಟ್-1) / (ಆಡಿಟ್-2), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ವಿಕಾಸಸೌಧ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ಎಲ್ಲಾ ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಣಾಧಿಕಾರಿಗಳು.
4) ಎಲ್ಲಾ ಇಲಾಖಾ ಮುಖ್ಯಸ್ಥರು.
5) ಸಾರಿಗೆ ಆಯುಕ್ತರು, ಬೆಂಗಳೂರು.
6) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.